# ವರನಟನ ಅಮೃತಹಸ್ತ ಕುಲುಕಿದಾಗ...

ಏಪ್ರಿಲ್ 24ರಂದು ವರನಟ ರಾಜಕುಮಾರ್ ಹುಟ್ಟುಹಬ್ಬ. ಅವರ 66ನೇ ಹುಟ್ಟುಹಬ್ಬಕ್ಕೆ ಶುಭಾಶಯ ಕೋರಿ ಹಸ್ತಲಾಘವ ಮಾಡಿದಾಗ ರೋಮಾಂಚನವಾಗಿ ಖುಷಿಯಿಂದ ಕಣ್ಣಲ್ಲಿ ನೀರು ತುಂಬಿಕೊಂಡಿತ್ತು. ಈ ಘಟನೆ ಎಂದೂ ಮರೆಯಲಾಗದ ಸವಿನೆನಪಾಗಿ ಮನದಾಳದಲ್ಲೇ ಉಳಿದಿದೆ.

■ ಟಿ.ನಾ. ರಾಜೇಂದ್ರ, ಮೈಸೂರು



ರಾಜ್ ಅಭಿನಯದ ಎಲ್ಲ ಸಿನಿಮಾಗಳನ್ನು ಕನಿಷ್ಠ ಐದು ಬಾರಿ ನೋಡಿದ್ದ ನಾನು 'ಕವಿರತ್ನ ಕಾಳಿದಾಸ' ಸಿನಿಮಾವನ್ನು 25 ಬಾರಿ ನೋಡಿದ್ದೇನೆ.

ಕನ್ನಡದ ಕಣ್ಮಣಿ, ವರನಟ ರಾಜಕುಮಾರ್ ಎಲ್ಲರ ಅಚ್ಚುಮೆಚ್ಚು. ಅವರ ಸಿನಿಮಾಗಳನ್ನು ಇಷ್ಟಪಡದ ಕನ್ನಡಿಗರೇ ಇಲ್ಲ. ಇನ್ನು ಇಂಥ ಮೇರುಶಿಖರವನ್ನು ಹತ್ತಿರದಿಂದ ನೋಡುವ ಸೌಭಾಗ್ಯ ಸಿಕ್ಕಿತೆಂದರೆ ಸ್ವರ್ಗಕ್ಕೆ ಮೂರೇ ಗೇಣು. ಅಂತಹ ಸುಯೋಗ ನನಗೆ ಒದಗಿಬಂದದ್ದು ನನ್ನ ಸುಕೃತವೆಂದೇ ಹೇಳಬೇಕು. ಸವಿನೆನಪುಗಳ ಸಾಲಿಗೆ ಸೇರಿದ ಈ ಘಟನೆಯನ್ನು ಅವರ ಹುಟ್ಟುಹಬ್ಬದ (ಏಪ್ರಿಲ್ 24) ಸಂದರ್ಭದಲ್ಲೇ ನೆನೆಯುವುದು ಔಚಿತ್ಯಪೂರ್ಣ.

ಅದೊಂದು ಅವಿಸ್ಮರಣೀಯ ದಿನ. ಸರ್ಕಾರಿ ನೌಕರಿಯಲ್ಲಿದ್ದ ನಾನು ಕೆಲಸದ ನಿಮಿತ್ತ ತುರ್ತಾಗಿ ಬೆಂಗಳೂರಿಗೆ ಬಂದಿದ್ದೆ. ಅದೇ ಸಮಯಕ್ಕೆ ನಮ್ಮ ಅಣ್ಣ ಮತ್ತು ಚಲನಚಿತ್ರ ನಿರ್ದೇಶಕರಾದ ಬುದಾಳ್ ಕೃಷ್ಣಮೂರ್ತಿಯವರು ಆಕಸ್ಮಿಕವಾಗಿ ಭೇಟಿಯಾದರು. ನಾನು ಅವರಿಬ್ಬರ ಕುಶಲೋಪರಿ ವಿಚಾರಿಸಿದಾಗ ಅವರು ತುರ್ತಾಗಿ ಎಲ್ಲೋ ಹೋಗುವವರಾಗಿದ್ದರು. ಅದನ್ನು ಗಮನಿಸಿದ ನಾನು ಅವರನ್ನು ವಿಚಾರಿಸಿದಾಗ ಅವರು ರಾಜಕುಮಾರ್ ಅವರ 66ನೇ ಹುಟ್ಟುಹಬ್ಬವಾದ ಕಾರಣ ಅವರಿಗೆ ಶುಭಾಶಯಗಳನ್ನು ಕೋರಲು ಹೋಗುತ್ತಿದ್ದೇವೆ ಎಂದಾಗ ನನಗೆ ಸ್ವರ್ಗವೇ ಸಿಕ್ಕಿದಂತಾಯಿತು.

ನನ್ನ ನೆಚ್ಚಿನ ರಾಜಕುಮಾರ್‌ರವರನ್ನು ನೋಡುವ ಸೌಭಾಗ್ಯ ದೊರೆಯುತ್ತದೆ ಎಂದು ನನ್ನಲ್ಲಿ ನಾನೇ ಕುಣಿದು ಕುಪ್ಪಳಿಸುವಂತಾಯಿತು. ಕೆಲಸ ನಿಮಿತ್ತ ಬಂದಿದ್ದ ನಾನು ಆ ಕೆಲಸದ ಕಡೆ ಗಮನಕೊಡದೆ ರಾಜಕುಮಾರ್ ಅವರನ್ನು ಯಾವಾಗ ನೋಡುತ್ತೇನೆಯೋ ಎಂಬ ಕಾತುರ ಮನದಲ್ಲಿ ಮರು ಮಾತನಾಡದೆ ಅವರ ಜೊತೆ ನಾನು ಸಹ ಹೊರಟೆ. ನನಗೆ ಯಾವಾಗ ಮನೆ ಸಿಗುತ್ತದೆಯೋ ಎಂಬ ಕಾತುರ. ಸುಮಾರು 10.30ರ ಸಮಯಕ್ಕೆ ಅವರ ಮನೆ ಹತ್ತಿರ ಹೋದೆವು. ಅವರ ಮನೆಯಿಂದ ಅರ್ಧ ಕಿಲೋಮೀಟರ್ ದೂರದಲ್ಲಿಯೇ ನಮ್ಮ ವಾಹನವನ್ನು ನಿಲ್ಲಿಸಿದೆವು. ಕಾರಣ ಅಷ್ಟು ದೂರದಿಂದಲೇ ರಾಜ್ ಅವರ ಅಭಿಮಾನಿಗಳು ರಸ್ತೆಯನ್ನು ಆಕ್ರಮಿಸಿಕೊಂಡಿದ್ದರು. ಅಲ್ಲಿಂದ ಅವರ ಮನೆಗೆ ಬರುವ ಹೊತ್ತಿಗೆ ಸಾಕು ಸಾಕಾಯಿತು. ಆದರೂ ಅವರ ಅಭಿಮಾನಿಗಳ ಸರಪಳಿಯನ್ನು ಭೇದಿಸಿಕೊಂಡು ಅಣ್ಣಾವ್ರ ಮನೆ ಒಳಗೆ ಹೋದೆವು. ಅಲ್ಲಿ ಪ್ರಮುಖ ನಟರ ಜೊತೆ ಮಾತನಾಡುತ್ತಿದ್ದ ರಾಜಣ್ಣನವರು ಮತ್ತು ಪಾರ್ವತಮ್ಮ ರಾಜಕುಮಾರ್ ಅವರನ್ನು ಕಣ್ಣು ತುಂಬಿಕೊಂಡೆವು ಹಾಗೂ ಅಭಿನಂದಿಸಿದೆವು.

ರಾಜಣ್ಣನವರನ್ನು ನೋಡುತ್ತಿದ್ದ ಸಮಯದಲ್ಲಿ ನನ್ನ ಕಣ್ಣಲ್ಲಿ ನೀರು ತುಂಬಿಕೊಂಡಿತ್ತು. ಕಾರಣ ಏನೋ ಮಹತ್ತರವಾದುದನ್ನು ಸಾಧಿಸಿದೆ ಎನ್ನುವ ರೀತಿಯಲ್ಲಿ ಅದು ಅವರಿಗೆ ಹಸ್ತಲಾಘವ ಮಾಡಿದಾಗಲಂತೂ ಮೈ ರೋಮಾಂಚನವಾಯಿತು. ಆ ಸಮಯದಲ್ಲಿ ಸಾಕಷ್ಟು ಜನಪ್ರಿಯ ನಾಯಕ ನಟ, ನಟಿಯರು, ಚಿತ್ರ ನಿರ್ದೇಶಕರ ಸಮೂಹವೇ ಇತ್ತು. ಇದನ್ನೆಲ್ಲ ಕಂಡ ನನಗೆ ಸ್ವರ್ಗವೇ ಸಿಕ್ಕಂತಾಯಿತು ಮತ್ತು ತುಂಬಾ ದಿನದ ಕನಸು ನನಸಾದಂತಾಯಿತು.

ರಾಜಕುಮಾರ್‌ರವರ ಯಾವುದೇ ಚಿತ್ರಗಳನ್ನು ನಾಲ್ಕರಿಂದ ಐದು ಬಾರಿ ನೋಡಿಯೇ ಇರುತ್ತಿದ್ದೆ. ಅದರಲ್ಲೂ 1983ರಲ್ಲಿ ತೆರೆಕಂಡ ನನ್ನ ನೆಚ್ಚಿನ ಸಿನಿಮಾ 'ಕವಿರತ್ನ ಕಾಳಿದಾಸ' ಚಿತ್ರವನ್ನು ಸುಮಾರು 25 ಸಾರಿ ನೋಡಿದ್ದೇನೆ. ಪದೇ ಪದೇ ಆ ಚಿತ್ರವನ್ನು ಮತ್ತು ರಾಜಕುಮಾರ್‌ರವರನ್ನು ನೋಡಿದ ಆ ಸುಮಧುರ ಸವಿ ನೆನಪು ಇನ್ನೂ ಹಚ್ಚ ಹಸುರಾಗಿದೆ. ■